## ಕವಿತೆ



**ತೇಜಾವತಿ ಎಚ್.ಡಿ.**

ಕಲೆ: ಸಂತೋಷ್ ಸಸಿಹಿತ್ಲು

# ಗುಲ್ ಮೊಹರ್

ನಿನ್ನ ಹಸಿವು ಬಾಯಾರಿಕೆಗಳ ಭಾರದ ಮೂಟೆಯನ್ನು ಜೀವಮಾನವಿಡೀ
ಹೊತ್ತು ಸಾಗಿ ದಣಿಯಬೇಡ
ಪ್ರಯಾಣ ದೀರ್ಘವಾಗಿಲ್ಲ ಈಗ
ನೆರಳಿದ್ದಲ್ಲಿ ಇಳಿಸಿ ವಿಶ್ರಾಂತಿ ತಗೋ
ಬಾಗಿದ ಬೆನ್ನುಗಳು ಹಗುರಾಗಿ
ಭುಜಗಳು ಶಕ್ತಿ ಪಡೆದು ಮನಸು ಅರಳಲಿ

ನೋಡಲ್ಲಿ
ವರ್ಷವಿಡೀ ಸಜ್ಜಾಗಿ ಅರಳಲು
ಮೇ ಆಗಮನಕ್ಕಾಗಿ ಕಾಯುವ ಗುಲ್ ಮೊಹರ್‌ಗಳನ್ನೊಮ್ಮೆ
ಎಷ್ಟು ನಿರಾಳ ಎಂತಹ ಸೌಂದರ್ಯ
ತುಂಬು ಯೌವ್ವನ ಕಾಡುವ ಕವಿತೆ
ಸೂರ್ಯ ರಶ್ಮಿಯನ್ನೂ ತಡೆದು ನಿಲ್ಲಿಸಿವೆ ತನ್ನ ಮೋಹಕ ದಳಗಳಲ್ಲಿ
ಭೂಮಿಗೆ ತಾಕದಂತೆ

ನೆನಪಿಸಿಕೋ ಬಾಲ್ಯವನ್ನೊಮ್ಮೆ
ನವ ವಸಂತದ ದಿಬ್ಬಣ ಚಪ್ಪರಗಳ ಅಂಬರದಲ್ಲಿ ಅವುಗಳ ಕಾರುಬಾರು
ಎಳನೀರ ಮರೆಯಲಿ ತುಸು ನಕ್ಕು ಕೆನ್ನೆ ಕೆಂಪಾಗುತ್ತಿದ್ದ ಗುಲ್ ಮೊಹರ್‌ಗಳು

ನೀಲ ಗಗನ ಹಸಿರು ಚಪ್ಪರ ಕೆಂದುಟಿಯ ಹೂ ಝುರಿಗಳು
ಅನ್ಯೋನ್ಯವಾಗಿದ್ದವು ಬಣ್ಣಗಳು
ಪರಸ್ಪರ ಬೆರೆತು

ಈಗೀಗ
ಒಂದೊಂದು ಬಣ್ಣಕ್ಕೂ ನೂರೆಂಟು ಮುಖಮುದ್ರೆ
ಒಂದರೊಳಗೊಂದು ಬೆರೆಯದ ಕೆಮಿಕಲ್ ಪ್ರಯೋಗ

